ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಅಧ್ಯಕ್ಷರು :- ಮಾನ್ಯ ಗುರುಪಾದಪ್ಪನವರೇ, ನಿಮ್ಮ ಪ್ರಶ್ನೆಗೆ (62:328) ಟೈಮ್ ತೆಗೆದುಕೊಂಡಿದ್ದಾರೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ :- ನನ್ನ ಪ್ರಶ್ನೆಗೆ ಉತ್ತರ ಬರುವುದಿಲ್ಲ. ಒಂದು ಕಡೆ ಸರ್ಕಾರದವರೇ ಹೊಡೆದಾಟ ಮಾಡಿಕೊಳ್ಳುತ್ತಾರೆ. ಒಂದು ಪ್ರಶ್ನೆಗೂ ಉತ್ತರಕೊಡುವುದಿಲ್ಲ. ಯಾವಾಗ ನೋಡಿದರೂ ನನ್ನ ಪ್ರಶ್ನೆ ಮುಂದೆ ಹೋಗುತ್ತದೆ. ಮೂರು ದಿವಸಗಳ ನಂತರ ಈ ಒಂದು ಪ್ರಶ್ನೆ ಬಂದಿದೆ. ಭಗವಂತ ಕೊನೆಗೂ ಬಂತಲ್ಲಾ ಅಂತ ನೋಡಿದರೆ ಅದಕ್ಕೂ ಉತ್ತರ ಇಲ್ಲ. ಸರ್ಕಾರ ಇದೆಯೋ ಇಲ್ಲವೋ?

ಶ್ರೀ ಆರ್.ವಿ.ದೇಶಪಾಂಡೆ :- ಈ ಪ್ರಶ್ನೆಗೆ ಉತ್ತರ ಯಾವತ್ತೂ ಬರುವುದಿಲ್ಲ. 'ಆಶ್ರಯ' ಸ್ಕೀಮ್‌ನಲ್ಲಿ ಏನು ಮನೆ ಕಟ್ಟಬೇಕಲ್ಲಾ, ಅದರ ಬಗ್ಗೆ ಈ ಪ್ರಶ್ನೆ ಇದೆ. ಈ ಸರ್ಕಾರದಿಂದ ಉತ್ತರ ಯಾವಾಗಲೂ ಬರುವುದಕ್ಕೆ ಸಾಧ್ಯವಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಒಂದೂವರೆ ಲಕ್ಷ ಮನೆಗಳನ್ನು ಜೂನ್ ತಿಂಗಳ ಒಳಗೆ ಕಟ್ಟುತ್ತೇವೆ ಎಂದು ಹೇಳಿದ್ದರು. ನಾನು ಇಡೀ ರಾಜ್ಯದಲ್ಲಿ 20 ಜಿಲ್ಲೆಗಳಲ್ಲೂ ಪ್ರವಾಸ ಮಾಡಿದ್ದೇನೆ. ಎಲ್ಲಾ ಸೇರಿ ನಾಲ್ಕುನೂರು ಮನೆಗಳು ಸಹ ರೆಡಿ ಇಲ್ಲ. ಆದ್ದರಿಂದ ಈ ಪ್ರಶ್ನೆಗೆ ಉತ್ತರ ಬರುವುದಕ್ಕೆ ಸಾಧ್ಯವಿಲ್ಲ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ :- ಉತ್ತರ ಕೊಡದೇ ಇರುವುದಕ್ಕೆ ಕಾರಣ, ಈ ಮನೆಗಳು ಇಲ್ಲ. ನನ್ನ ನಿನ್ನೆಯ ಪ್ರಶ್ನೆಯೂ ಮುಂದೆ ಹೋಯಿತು. ಅದಕ್ಕೂ ಉತ್ತರ ಕೊಡಲಿಲ್ಲ. ಏನು ಮಾಡಿತ್ತಿದೆ ಸರ್ಕಾರ? ಒಂದಕ್ಕೂ ಉತ್ತರ ಕೊಡುವುದಿಲ್ಲ ಎಂದರೆ ಇವರ ಕೆಲಸ ಏನು? ಸುಮ್ಮನೆ ಘೋಷಣೆ ಮಾಡುವುದಷ್ಟೇ ಇದರ ಅರ್ಥ ಏನು? ಉತ್ತರ ಕೊಡುವುದು ಯಾವಾಗ? 'ಆಶ್ರಯ'ದಲ್ಲಂತೂ ಉತ್ತರ ಕೊಡುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ ಅಲ್ಲಿ ಕೆಲಸ ಏನೂ ಮಾಡಿಲ್ಲ.

ಅಧ್ಯಕ್ಷರು :- ಇಲ್ಲ, ಅವರು ಪತ್ರ ಬರೆದಿದ್ದಾರೆ. ಏನೆಂದರೆ, ರಾಜ್ಯದ ವಿವಿಧ ಭಾಗಗಳಿಂದ ಮಾಹಿತಿಗಳನ್ನು ತರಿಸಬೇಕಾಗಿದೆ. ಅದಕ್ಕೆ ಸ್ವಲ್ಪ ಕಾಲಾವಕಾಶ ಬೇಕಾಗುತ್ತದೆ ಎಂದು.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ :- ನಮ್ಮ ಅವಧಿಯೊಳಗೆ ಈ ಪ್ರಶ್ನೆ ಬರುತ್ತದೆಯೋ ಇಲ್ಲವೋ ಎಂದು ನನಗೆ ಭಯ. ನನ್ನ ಶಾಸಕ ಅವಧಿಯೊಳಗೆ ಇದು ಬರುತ್ತದೆಯೋ ಇಲ್ಲವೋ ಗೊತ್ತಿಲ್ಲ. ಕೊನೆಯ ಪಕ್ಷ ಈ ಅಧಿವೇಶನದ ಒಳಗೆ ಉತ್ತರ ಬರುವಂಥ ವ್ಯವಸ್ಥೆಯನ್ನು ತಾವು ಮಾಡಬೇಕು. ಇಲ್ಲಿಮೂರು ಪ್ರಶ್ನೆಗಳು ಇವೆ. ತಮ್ಮ ಮುಖಾಂತರ ನಾವು ಕೇಳಬೇಕಾಗುತ್ತದೆ. ಯಾವಾಗ ಉತ್ತರವನ್ನು ಕೊಡಿಸುತ್ತೀರಿ? ದಯವಿಟ್ಟು ನಮ್ಮ ರಕ್ಷಣೆಗೆ ತಾವು ತಾನೇ ಬರಬೇಕು?

(ಮಾನ್ಯ ವಸತಿಮಂತ್ರಿಗಳು ಈ ಹಂತದಲ್ಲಿ ಸಭೆಗೆ ಆಗಮಿಸಿದರು)

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ :- ನೋಡಿ, ಮಂತ್ರಿಗಳು ಬಂದಿದ್ದಾರೆ. ಅವರು ಉತ್ತರ ಕೊಡುವುದಕ್ಕೆ ತಯಾರು ಇದ್ದಾರೋ ಏನೋ.

ಶ್ರೀ ಗೋಪಿನಾಥ.ಆರ್.ಸಾಂಡ್ರ :- ನಾನು ಅದಕ್ಕೆ ಟೈಮ್ ಕೇಳಿದ್ದೇನೆ. ನೀವು ತಾಲ್ಲೂಕುವಾರು, ಯುನಿಟ್‌ವಾರು ಎಲ್ಲಾ ಕೇಳಿದ್ದೀರಿ. ಅದಕ್ಕೆಲ್ಲಾ ಉತ್ತರ ಬರಬೇಕು.

ಶ್ರೀ ಆರ್.ವಿ.ದೇಶಪಾಂಡೆ :- ಇದಕ್ಕೆ ಎಲ್ಲಾ ಕಡೆಯಿಂದ ಉತ್ತರ ತರಿಸಬೇಕಾಗಿಲ್ಲ. ನಾನು ರಾಜ್ಯದಾದ್ಯಂತ ಪ್ರವಾಸ ಮಾಡಿದ್ದೇನೆ. ಆಶ್ರಯದಲ್ಲಿ ಎಷ್ಟು ಮನೆಗಳನ್ನು ಕಟ್ಟಿದ್ದಾರೆ ಎಂದು ಹೇಳುವುದಕ್ಕೆ ನನಗೆ ಹದಿನೈದು ನಿಮಿಷ ಟೈಮ್ ಕೊಟ್ಟರೆ ನಾನು ಉತ್ತರ ಕೊಡುತ್ತೇನೆ.

ನಾನು ಈ ವಿಚಾರವಾಗಿ ತನಿಖೆ ಮಾಡಿದ್ದೇನೆ. ಇದು ತಮಗೂ ಗೊತ್ತು. ಪುನರ್‌ವಿಮರ್ಶಿತ ಕಾರ್ಯಕ್ರಮದ ಪ್ರಕಾರ, ಇಡೀ ರಾಜ್ಯದಲ್ಲಿ ಒಂದೂವರೆ ಲಕ್ಷ ಮನೆಗಳನ್ನು ಜೂನ್ ತಿಂಗಳಲ್ಲಿ ಕಟ್ಟಬೇಕಾಗಿತ್ತು. ಆದರೆ ಇವತ್ತು ಇಡೀ ರಾಜ್ಯದಲ್ಲಿ 5 ಸಾವಿರ ಮನೆಗಳು ರೆಡಿಯಾಗಿಲ್ಲ. ಈ ಕೆಲಸವನ್ನು ಜಿಲ್ಲಾಧಿಕಾರಿಗಳಿಗೆ ಕೊಟ್ಟನಂತರ ಸ್ವಲ್ಪ ಕೆಲಸ ಶುರುವಾಗಿದೆ. ಅದಕ್ಕಾಗಿ, ಈ ಪ್ರಶ್ನೆಗೆ ನೀವೇನು ಉತ್ತರ ಕೊಡುತ್ತೀರಿ?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ :- ಅದು ಕೇಳಿದ್ದೀರಿ, ಇದು ಕೇಳಿದ್ದೀರಿ ಎಂದು ಹೇಳಿದರೆ, ನಾವು ಕೇಳಬಾರದೇ? ಇಂತಾದ್ದನ್ನೇ ಕೇಳಬೇಕೆಂದು ಏನಾದರೂ ನಿರ್ಬಂಧ ಇದೆಯೇ?

ಶ್ರೀ ಗೋಪಿನಾಥ ಆರ್. ಸಾಂಡ್ರಾ :- ನೀವು ಕೇಳಿದ್ದು ದಿಟ. ನಮಗೆ ಮಾಹಿತಿ ಇಲಾಖೆಗಳಿಂದ ಬರಬೇಕಾಗಿದೆ. ಜಿಲ್ಲಾವೈಸ್ ಬೇಕಾದರೆ ಈಗಲೇ ಕೊಡುತ್ತೇನೆ; ಆದರೆ ತಾವು ತಾಲ್ಲೂಕುವೈಸ್, ಯುನಿಟ್‌ವೈಸ್ ಕೇಳಿದ್ದೀರಿ. ಈ ಮಾಹಿತಿ ಬಂದನಂತರ ಕೊಡುತ್ತೇನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ :- ತಮಗೆ ಎಷ್ಟು ದಿವಸ ಟೈಮ್ ಬೇಕು?

ಶ್ರೀ ಸಿ.ಬೈರೇಗೌಡ :- ಅಧ್ಯಕ್ಷರೇ, ಮನೆಗಳನ್ನು ವಿಧಾನ ಸಭಾ ಕ್ಷೇತ್ರವಾರು ಅಲಾಟ್ ಮಾಡಿರುವುದು. ಅದನ್ನು ಬಿಟ್ಟು ಇನ್ನೇನು ಕೇಳಿದ್ದಾರೆ? ಅವರು ಜಿಲ್ಲಾಧಿಕಾರಿಗಳ ಸಭೆ ನಡೆಸಿದ್ದಾರೆ, ಪ್ರತಿ ಜಿಲ್ಲೆಯ ಶಾಸಕರ ಸಭೆ ನಡೆಸಿದ್ದಾರೆ. ಮುಖ್ಯಮಂತ್ರಿಗಳೂ ಆ ಸಭೆಗಳಲ್ಲಿ ಭಾಗವಹಿಸಿ, ಮಾತನಾಡಿದ್ದಾರೆ. ಬೇಸಿಕ್ ಅಂಕಿಅಂಶ ಇಲ್ಲದೇ, ಇನ್ನೇನು ಕೆಲಸ ಮಾಡಿದ್ದೀರಿ? ಹಾಗಾದರೆ ಇನ್ನೇನು ರಿವ್ಯೂ ಮಾಡಿದ್ದೀರಿ?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ :- ಅವರು ಹೇಳುತ್ತಾರೆ, ನಾವು ಬಹಳಷ್ಟು ಪ್ರಶ್ನೆ ಕೇಳಿದ್ದೇವೆ ಎಂದು. ನಾವು ಪ್ರಶ್ನೆ ಕೇಳುವುದರಲ್ಲಿ ಏನು ತಪ್ಪಿದೆ?

ಅಧ್ಯಕ್ಷರು :- ಅವರು 15 ದಿವಸ ಕಾಲಾವಕಾಶ ಕೇಳಿದ್ದಾರೆ.

(ಗೊಂದಲ)

ಅಧ್ಯಕ್ಷರು :- ಮಾನ್ಯ ಮಂತ್ರಿಗಳೇ, ತಮ್ಮ ಹತ್ತಿರ ಏನು ಮಾಹಿತಿ ಇದೆ.

ಶ್ರೀ ಗೋಪಿನಾಥ ಆರ್.ಸಾಂಡ್ರಾ :- ಇವರ ಪ್ರಶ್ನೆಗಳಿಗೆ ನನ್ನ ಹತ್ತಿರ ಮಾಹಿತಿ ಇಲ್ಲ. ಆದರೆ, ಬೇರೆ ಪ್ರಶ್ನೆಗಳಿಗೆ ಉತ್ತರವನ್ನು ಕೊಡುತ್ತೇನೆ. ಸನ್ಮಾನ್ಯ ಸದಸ್ಯರ ಪ್ರಶ್ನೆಗಳಿಗೆ ಉತ್ತರಗಳನ್ನು ತರಿಸುವುದಕ್ಕೆ ಹೇಳಿದ್ದೇನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ :- ನಿಮ್ಮ ಹತ್ತಿರ ಮಾಹಿತಿ ಇಲ್ಲವೆಂದರೆ, ಇನ್ನು ಯಾರ ಹತ್ತಿರ ಇರುತ್ತದೆ? ತಾವು ಮಂತ್ರಿಗಳು, ತಮ್ಮ ಹತ್ತಿರವೇ ಇಲ್ಲವೆಂದರೆ, ಇನ್ನು ಇಲ್ಲಿ ಉತ್ತರ ಕೊಡುವವರು ಯಾರು? ನನ್ನ ಪ್ರಶ್ನೆಗಳಿಗೆ ಯಾವಾಗ ಉತ್ತರ ಕೊಡುತ್ತೀರಿ ಎಂಬುದನ್ನಾದರೂ ಹೇಳಿ. ಇದು ಮಹತ್ವದ ಪ್ರಶ್ನೆ; ಉತ್ತರವನ್ನು ಕೊಡುವುದಿಲ್ಲವೆಂದು ಹೇಳಿದರೆ, ಸರ್ಕಾರ ಏನು ಮಾಡುತ್ತಿದೆ?

ಶ್ರೀ ಗೋಪಿನಾಥ ಆರ್. ಸಾಂಡ್ರಾ :- ಒಂದೆರಡು ಪ್ರಶ್ನೆ ಬಿಟ್ಟು, ಉಳಿದ ಎಲ್ಲಾ ಪ್ರಶ್ನೆಗಳಿಗೂ ಉತ್ತರವನ್ನು ಕೊಡುತ್ತೇನೆ. ಮಾನ್ಯ ಸದಸ್ಯರ ಈ ಪ್ರಶ್ನೆಗೆ, ಇನ್ನು ಮೂರು ದಿವಸದಲ್ಲಿ ಉತ್ತರವನ್ನು ಕೊಡುತ್ತೇನೆ.

ವಿಷಯ :- ಪರಿಶಿಷ್ಟ ಜಾತಿ :ಪರಿಶಿಷ್ಟ ವರ್ಗದ ವಿದ್ಯಾರ್ಥಿನಿಲಯಗಳಿಗೆ ಅನುದಾನ ನೀಡುವ ಬಗ್ಗೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 66(52)

ಶ್ರೀ ಮನೋಹರ ಯು.ಐನಾಪುರ(ಬಳ್ಳೊಳ್ಳಿ)

ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಸರ್ಕಾರದ ನಿಯಮಾವಳಿ ಪ್ರಕಾರ ಬಿಜಾಪುರ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಅನುದಾನಿತ ವಿದ್ಯಾರ್ಥಿನಿಲಯಗಳಿಗೆ ಅನುದಾನ ನೀಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

(ಆ) ಬಿಜಾಪುರ ಜಿಲ್ಲೆಯನ್ನು ಹೊರತು ಪಡಿಸಿ ಬೇರೆ ಜಿಲ್ಲೆಯಲ್ಲಿ ಅನುದಾನವನ್ನು ಆರ್ಥಿಕ ವರ್ಷದಲ್ಲಿ ನೀಡಿರುವುದು ನಿಜವೇ?

(ಇ) ತಡವಾಗಿರುವುದಕ್ಕೆ ಕಾರಣವೇನು?

ಶ್ರೀ ಧರ್ಮಸಿಂಗ್

(ಸಮಾಜ ಕಲ್ಯಾಣ ಸಚಿವರು)

ಸರ್ಕಾರದ ನಿಯಮಗಳನುಸಾರವಾಗಿ ಸಕಾಲದಲ್ಲಿ ಬಂದಿದ್ದ ಎಲ್ಲಾ ಅನುದಾನ ಪ್ರಸ್ತಾವನೆಯನ್ನು ಮಂಜೂರು ಮಾಡಲಾಗಿದೆ.

ಮೇಲಿನ ಉತ್ತರದಂತೆ ಇತರೆ ಜಿಲ್ಲೆಗಳ ಜೊತೆಗೆ ಬಿಜಾಪುರ ಜಿಲ್ಲೆಯಿಂದಲೂ ಬಂದ ಅನುದಾನ ಪ್ರಸ್ತಾವನೆಗಳಿಗೆ ಲಭ್ಯವಾಗಬಹುದಾದ ಅನುದಾನ ಬಿಡುಗಡೆ ಮಾಡಲಾಗಿದೆ.

ಉದ್ಭವಿಸುವುದಿಲ್ಲ.

ಶ್ರೀ ಮನೋಹರ್ ಯು.ಐನಾಪುರ :- ಸಭಾಧ್ಯಕ್ಷರೇ, ನಾನು ಬಿಜಾಪುರ ಜಿಲ್ಲೆಯಲ್ಲಿ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡದ ಜನರ ವಿದ್ಯಾರ್ಥಿನಿಲಯಗಳಿಗೆ, ಸರ್ಕಾರದ ಆದೇಶದ ಪ್ರಕಾರ, ಅಂದರೆ, ಪ್ರತಿ ವಿದ್ಯಾರ್ಥಿಗೆ 250 ರೂಪಾಯಿಯಂತೆ ಅನುದಾನವನ್ನು ಕೊಟ್ಟಿದ್ದೀರೋ ಇಲ್ಲವೋ ಎಂದು ಕೇಳಿದ್ದೇನೆ. ಇದನ್ನು ಕನ್‌ಸಿಡರ್ ಮಾಡಿ ಗ್ರಾಂಟನ್ನು ಒದಗಿಸಿದ್ದೇವೆಂದು ಮಾನ್ಯಸಚಿವರು ಹೇಳಿದ್ದಾರೆ. ಆದರೆ, ನನಗೆ ಗೊತ್ತಿರುವಹಾಗೆ, ಕೇವಲ ಬಿಜಾಪುರ ಜಿಲ್ಲೆ ಬಿಟ್ಟು, ಬೇರೆ ಎಲ್ಲಾ ಜಿಲ್ಲೆಗಳಲ್ಲಿಯೂ ಸರ್ಕಾರಿ ಆದೇಶದ ಪ್ರಕಾರ, ಪ್ರತಿ ವಿದ್ಯಾರ್ಥಿಗೆ 250 ರೂಪಾಯಿಯಂತೆ ಅನುದಾನವನ್ನು ಕೊಡಲಾಗಿದೆ. ಆದರೆ, ಬಿಜಾಪುರ ಜಿಲ್ಲೆಯಲ್ಲಿ ಕೊಟ್ಟಿಲ್ಲ. ಅದಕ್ಕಾಗಿ, ಮಾನ್ಯ ಸಚಿವರು ಸರಿಯಾದ ಉತ್ತರವನ್ನು ಕೊಡಬೇಕೆಂದು ವಿನಂತಿಸುತ್ತೇನೆ.

ಶ್ರೀ ಧರ್ಮಸಿಂಗ್ :- ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರೂ ಕೂಡ, ಸಮಕ್ಷಮ ನನ್ನ ಜೊತೆಯಲ್ಲಿ ಸಮಾಲೋಚನೆ ಮಾಡಿದ್ದಾರೆ. ಬಿಜಾಪುರ ಜಿಲ್ಲೆಯಲ್ಲಿರತಕ್ಕ ಧನಸಹಾಯದ ವಿದ್ಯಾರ್ಥಿನಿಲಯಗಳು ಅರವತ್ತಾರು ಏನಿವೆ, ಅದರಲ್ಲಿ ಕೆಲವು ವಿದ್ಯಾರ್ಥಿನಿಲಯಗಳ ವರದಿಗಳು ಜಿಲ್ಲಾ ಪರಿಷತ್ತುಗಳಿಂದ ಬರಬೇಕಾಗಿದೆ; ಈ ವರದಿಗಳು ಬಂದಮೇಲೆ ಕೊಡುತ್ತೇವೆ. ನಿನ್ನೆ ಕೂಡ